**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.12/2017</u>**

ಸರಕಾರದ ಪರವಾಗಿಃ ಜೇವರ್ಗಿ ಪೊಲೀಸ ಠಾಣೆ

-:ವಿರುದ್ದ:-

ಆರೋಪಿತರುಃ-1. ಸದಾಶಿವ ತಂದ ಬಸಯ್ಯಾ ಗುತ್ತೆದಾರ
ವಃ 21 ವರ್ಷ, ಉಃ ವೈನ ಶಾಪನಲ್ಲಿ ಕೆಲಸ,
ಸಾಃ ಸೊನ್ನ, ತಾಃ ಜೇವರ್ಗಿ

2. ಮಂಜುನಾಥ ತಂದೆ ನಿಂಗಪ್ಪ ಭಾವಿಮನಿ,
ವಃ 19 ವರ್ಷ, ಉಃ ವೈನ ಶಾಪನಲ್ಲಿ ಕೆಲಸ,
ಸಾಃ ಕೂಡಲ ಹಂಗರಗಾ, ತಾಃ ಆಳಂದ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ ಆ-1 ಆ-2

ಪ್ರಃ 2 ಪ್ರಾಸಾ-1 ಲಕ್ಷ್ಮಣ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇರುತ್ತದೆ, ಸದರಿ ಸಹಿಯನ್ನು ದಿನಾಂಕ 27-10-2016 ರಂದು ಮಾವನೂರ ಕ್ರಾಸ ಹತ್ತಿರ ತಾನು ಇದ್ದಾಗ ಪೊಲೀಸರು ಬಂದು ಅಕ್ರಮವಾಗಿ ಮದ್ಯ ಮಾರಾಟದ ವಿಚಾರವಾಗಿ ತನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ಇಬ್ಬರು ವ್ಯಕ್ತಿಗಳು ಎರಡು ರಟ್ಟಿನ ಬಾಕ್ಸನಲ್ಲಿ ಮಾರಾಟ ಮಾಡುತ್ತಿದ್ದರು, ತಮ್ಮನ್ನು ಕಂಡು ಸದರಿ ವ್ಯಕ್ತಿಗಳು ಅಲ್ಲಿಂದ ಓಡಿ ಹೋದರು, ನಂತರ ಪೊಲೀಸರು ಸದರಿ ಮದ್ಯವನ್ನು ಪೊಲೀಸ ಠಾಣೆಗೆ ತಂದು ತಮ್ಮ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತಾರೆ, ಎರಡೂ ಬಾಕ್ಸನಲ್ಲಿ 1) ಓರಿಜನಲ ಚಾಯ್ಸ ವಿಸಕಿಯ ತಲಾ 180 ಬಾಟಲಿಗಳು ಹಾಗೂ 2) ಓ ಟಿ ವಿಸಕಿಯ 20 ಪೌಚಗಳು ದೊರೆತ್ತಿದ್ದು ಅವುಗಳ ಕಿಮ್ಮತ್ತು ರೂ.6000/- ಆಗಿತ್ತು, ಘಟನಾ

ಸ್ಥಳದ ಚೆಕ್ಕಬಂದಿ ಪೂರ್ವಕ್ಕೆ ರಸ್ತೆ, ಮಶ್ಚಿಮಕ್ಕೆ ನಿಂಗರಾಯನ ಗುಡಿ, ಉತ್ತರಕ್ಕೆ ಸಿ ಸಿ ರಸ್ತೆ, ದಕ್ಷಿಣಕ್ಕೆ ಖುಲ್ಲಾ ಜಾಗ ಇರುತ್ತದೆ, ಪಂಚನಾಮೆಯಲ್ಲಿ ಬರೆದ ವಿಚಾರಗಳು ತನಗೆ ಗೊತ್ತು, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1 ಆ-2

ಪ್ರಃ 3 ಪ್ರಾಸಾ-2 ಅಬ್ದುಲ ಸಲೀಮ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 27-10-2016 ರಂದು ತಾನು, ಚಾಸಾ-1 ಅವರು ಸೊನ್ನ ಮತ್ತು ಹರವಾಳ ಗ್ರಾಮಕ್ಕೆ ಮಾವನೂರ ಗ್ರಾಮದದಿ ನಿಂಗರಾಯ ಗುಡಿಯ ಹತ್ತಿರ ಇಬ್ಬರು ವ್ಯಕ್ತಿಗಳು ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದ್ದ್‌ರೆಂಬ ಖಚಿತ ಮಾಹಿತಿ ಬಂದಿದೆ ಎಂದು ತನಗೆ ತಿಳಿಸಿದರು, ನಂತರ ಇಬ್ಬರು ಪಂಚರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿದರು, ಪಂಚರು ಒಪ್ಪಿಕೂಂಡ ಮೆರೆಗೆ ಎಲ್ಲರೂ ಕೂಡಿಕೊಂಡು ಮಾವನೂರ ಗ್ರಾಮದ ನಿಂಗರಾಯ ಗುಡಿಯ ಹತ್ತಿರ ಮದ್ಯಾಹ್ನ 02-30 ಗಂಟೆಗೆ ಹೋಗಿ ನೋಡಲಾಗಿ ಇಬ್ಬರು ಎರಡು ರಟ್ಟಿನ ಬಾಕ್ಸನಲ್ಲಿ ಮದ್ಯವನ್ನು ಇಟ್ಟು ಮಾರಾಟ ಮಾಡುತ್ತಿದ್ದರು, ತಾವು ದಾಳಿ ಮಾಡುವಷ್ಟರಲ್ಲಿ ಅವರು ತಮ್ಮನ್ನು ಕಂಡು ಅಲ್ಲಿಂದ ಓಡಿ ಹೋದರು, ನಂತರ ರಟ್ಟಿನ ಬಾಕ್ಸನ್ನು ಪರಿಶೀಲನೆ ಮಾಡಿದಾಗ ಬಾಕ್ಸನಲ್ಲಿ 1) ತಲಾ 90 ಎಂ ಎಲ್ ನ ಓರಿಜನಲ ಚಾಯ್ಸ ವಿಸಕಿಯ ತಲಾ 160 ಬಾಟಲಿಗಳು ಹಾಗೂ 2) ತಲಾ 180 ಎಂ ಎಲ್‌ನ ಓ ಟಿ ವಿಸಕಿಯ 20 ಪೌಚಗಳು ದೊರೆತ್ತಿದ್ದು ಅವುಗಳ ಕಿಮ್ಮತ್ತು ರೂ.6020/- ಆಗಿತ್ತು, ಅವುಗಳ ಪೈಕಿ ತಲಾ ಒಂದು ಬಾಟಲಿಯನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದು, ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೂಳ್ಳಲಾಯಿತು, ನಂತರ ಬಾತ್ಮಿದಾರರನ್ನು ವಿಚಾರಿಸಲಾಗಿ ಓಡಿ ಹೋದ ವ್ಯಕ್ತಿಗಳ ಹೆಸರು ಸದಾಶಿವ ಮತ್ತು ಮಂಜುನಾಥ ಎಂದು ತಿಳಿಸಿದರು, ನಂತರ ಮುದ್ದೆ ಮಾಲು, ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾಸಾ-1 ಅವರು ಠಾಣಾಧಿಕಾರಿಗೆ ಜ್ಞಾಪನಾ ಪತ್ರ ಮತ್ತು ಮುದ್ದೆ ಮಾಲನ್ನು ಮುಂದಿನ ಕ್ರಮಕ್ಕಾಗಿ ನೀಡಿದರು, ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1 ಆ-2

ಪ್ರಃ 4 ಪ್ರಾಸಾ-3 ಅಲ್ಲಾಭಕ್ಷ, ಎ ಎಸ್ ಐ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 27-10-2016 ರಂದು ತಾನು, ಸಾಯಂಕಾಲ 4-30 ರ ಸಮಯದಲ್ಲಿ ತಾನು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಮುದ್ದೆ ಮಾಲು ಹಾಗೂ ಜಪ್ತಿ ಪಂಚನಾಮೆಯೊಂದಿಗೆ ಸಲ್ಲಿಸಿದ ವರದಿಯನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಕಲ್ಲಿಸಿರುತ್ತೇನೆ, ದಿನಾಂಕ 27-10-2016 ರಂದು ಚಾಸಾ-4 ಅವರ ಹೇಳಿಕೆ ಪಡೆದರುತ್ತೇನೆ, ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-8 ಅವರಿಗೆ ವಹಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1 ಆ-2

ಪ್ರಃ: 5 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-1 ಆ-2

ಪ್ರ-6 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ ಆ-1 ಆ-2

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 10-06-2026 ಸಿವಿಲ್ ಹಾಗೂ ಪ್ರ ದ ನ್ಯಾ, ದಂಡಾಧಿಕಾರಿಗಳು,
ಜೇವರ್ಗಿ.